<u>ದಿನಾಂಕಃ **25-05-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲು **3** ನೇ ಆರೋಪಿ ಪರ ಶ್ರೀ ಬಿ ಎಂ ಎಲ್ ಜಿ ವಕೀಲರಿಂದ</u>

ಅಕ್ಟೋಬರ್ 2016 ರ ಅದಕ್ಕಿಂತ ಪೂರ್ವದಲ್ಲಿ ಆರೋಪಿ 2 ರಿಂದ 4 ರವರ ಪರಿಚಯ ನನಗೆ ಇರುವುದಿಲ್ಲ. ಗಾಜನೂರು ಗ್ರಾಮದ ಸರ್ವೇ ನಂಬರ್ 29, 30,50,51,52 ಹಾಗೂ 53 ರಲ್ಲಿ ಜಮೀನು ಇರುವ ಬಗ್ಗೆ ಹಾಗೂ 17,000/- ಕೋಳಿಗಳನ್ನು ಸಾಕಣೆ ಮಾಡುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನನಗೆ ಜಮೀನುಗಳಿಂದ ವಾರ್ಷಿಕ 80 ಲಕ್ಷ ಆಧಾಯ ಬರುತ್ತಿತ್ತು ಎಂಬ ಬಗ್ಗೆ ಪೊಲೀಸರಿಗೆ ನಾನು ಪಹಣಿಗಳನ್ನು ತೋರಿಸಿರುತ್ತೇನೆ. ಸಾರಿಯಾ ಗ್ರಾಮದಲ್ಲಿ 8 ಎಕರೆ 15 ಗುಂಟೆ ಜಮೀನನ್ನು ನಾನು ಸಾಲ ಮಾಡಿ ಖರೀದಿಸಿರುತ್ತೇನೆ ಎಂದರೆ ಸರಿ. ಆ ಕಾಲಕ್ಕೆ ನನ್ನ ಬಳಿ ನಗದಾಗಿ ಹಣ ಇರಲಿಲ್ಲ ಎಂದರೆ ಸರಿ. ಆ ಕಾಲಕ್ಕೆ ಕೆನರಾ ಬ್ಯಾಂಕ್ ಶಿವಮೊಗ್ಗದಲ್ಲಿ 60 ಲಕ್ಷ ಸಾಲ ಇತ್ತು ಎಂದರೆ ಸರಿ.

2. ನನಗೆ ಇಬ್ಬರೂ ಮಕ್ಕಳಿರುತ್ತಾರೆ. ನನ್ನ ಮಕ್ಕಳು ವಯಸ್ಸಿಗೆ ಬಂದ ನಂತರ ಪ್ರತ್ಯೇಕ ಪ್ರತ್ಯೇಕವಾಗಿ ವ್ಯವಹಾರಗಳನ್ನು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ರೈಸ್ ಪುಲ್ ವ್ಯವಹಾರದ ಬಗ್ಗೆ ಗೊತ್ತಿರುವುದಿಲ್ಲ. ಗಾಜನೂರು ಹಾಗೂ ಸಾರಿಯಾ ಗ್ರಾಮದ ಜಮೀನಿನ ವ್ಯವಹಾರಗಳನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿ. ನಾನು ನನ್ನ ಮಗನಾದ ಭರತ್( ಚಾಸಾ-1) ರವರಿಗೆ ಸಾರಿಯಾ ಗ್ರಾಮದ ಜಮೀನಿನ ಕೂಲಿ ಕೆಲಸಕ್ಕೆ ಎಷ್ಟು ಹಣ ಬೇಕಾಗುತಿತ್ತು ಅಷ್ಟನ್ನು ಮಾತ್ರ ಖರ್ಚಿಗಾಗಿ ಕೊಡುತ್ತಿದ್ದೆ ಎಂದರೆ ಸರಿ. ನಂದನ್ ಇವರು ನನಗೆ 2016 ರಲ್ಲಿ ಪರಿಚಯವಾಗಿದ್ದು ದಿನಾಂಕ ಮತ್ತು ತಿಂಗಳು ಮತ್ತು ವಾರದ ದಿನ ಗೊತ್ತಿರುವುದಿಲ್ಲ. ನಂದನ್ ಇವರು ನಮ್ಮ ಮನೆಗೆ ಬಂದಿರುವುದಿಲ್ಲ. ನಾನು ನಂದನ್ ಇವರ ಮನೆಗೆ ಹೋಗಿರುವುದಿಲ್ಲ. ನನ್ನ ಮಗ ನಂದನ್ ಇವರ ಜೊತೆ ಓಡಾಡುತ್ತಿರುವ ವಿಚಾರ ನನಗೆ 8-9 ನೇ ತಿಂಗಳು 2016 ರಲ್ಲಿ ಗೊತ್ತಾಗಿರುತ್ತದೆ. ನನಗೆ ಅವರವರು ಏನೇನು ವ್ಯವಹಾರ ಮಾಡಿಕೊಳ್ಳುತ್ತಿದ್ದರು ಎಂಬ ಬಗ್ಗೆ ಗೊತ್ತಿರಲಿಲ್ಲ ಎಂದರೆ ಸರಿ.

3. ನನ್ನ ಮಗ 50 ಲಕ್ಷ ಹಣ ಬೇಕು ಎಂದು ಕೇಳಿದಾಗ ಆ ಕಾಲಕ್ಕೆ ನನ್ನ ಬಳಿ ಹಣ ಇರಲಿಲ್ಲ ಮತ್ತು ಆತನಿಗೆ ಬೈದಿರುತ್ತೇನೆ ಎಂದರೆ ಸರಿ. ನಾನು ಹಣ ಕೊಡದೇ ಇದ್ದಾಗ ನನ್ನ ಮಗ ಹಿಸ್ಸೆ ಕೊಡುವಂತೆ ಕೇಳಿದ್ದು, ಆಗ ನನ್ನ ಹೆಂಡತಿ ಅವನಿಗೆ ಹಣ ಕೊಡಿ ಅವನ ಪಾಡಿಗೆ ಅವನು ಬದುಕಿಕೊಳ್ಳುತ್ತಾನೆ ಎಂದು ಹೇಳಿದ್ದರು ಎಂದರೆ ಸರಿ. ನಾನು ಋಷ್ಯಶೃಂಗ ಅಡಿಕೆ ಮಂಡಿಯಲ್ಲಿ 49,99,940/- ಹಣ ಪಡೆದುಕೊಂಡ ಬಗ್ಗೆ ಪೊಲೀಸರಿಗೆ ದಾಖಲೆಯನ್ನು ಕೊಟ್ಟಿರುತ್ತೇನೆ. ನಾನು ಪಾಸ್ ಪುಸ್ತಕವನ್ನು ಹೊರತುಪಡಿಸಿ ಹಣವನ್ನು ಸಾಲವಾಗಿ ಪಡೆದ ಬಗ್ಗೆ ಪೊಲೀಸರಿಗೆ ದಾಖಲೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗ 50,50,000/- ಹಣವನ್ನು ಬೆಂಗಳೂರಿಗೆ ಹೋಗಿ ಯಾರಿಗೆ ಕೊಟ್ಟಿರುತ್ತಾರೆ ಎಂಬುದರ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಹಣ ಕೊಟ್ಟು ಬಂದ ಎಷ್ಟು ದಿನಗಳ ನಂತರ ಬರಬೇಕು ಎಂಬ ಬಗ್ಗೆ ನಿಮ್ಮ ಮಗ ತಿಳಿಸಿರುತ್ತಾರ ಎಂದರೆ ಸಾಕ್ಷಿಯು ಎರಡು ದಿನಗಳ ನಂತರ ವರ್ತಮಾನ ಬರುತ್ತದೆ ಎಂದು ಹೇಳಿದ್ದ ಎಂದು

ಉತ್ತರಿಸಿರುತ್ತಾರೆ. ನನ್ನ ಮಗ ಸ್ವಾಮೀಜಿಯವರು ಬೆಂಗಳೂರಿಗೆ ಬರುವಂತೆ ಹೇಳಿದ್ದು ಆತನು ನನಗೆ ಹೇಳಿದ ಎರಡು ದಿವಸದ ನಂತರ ಹೋಗಿರುತ್ತಾನೆ. ನನ್ನ ಮಗ ಬೆಂಗಳೂರಿಗೆ ಹೋದ ಮಾರನೇ ದಿನ ಊರಿಗೆ ವಾಪಸ್ಸು ಬಂದಿರುತ್ತಾನೆ. ರೂ. 50,50,000/- ಹಣ ಕೊಟ್ಟ ಬಗ್ಗೆ ನಾನು ರಶೀದಿಯನ್ನು ಕೇಳಿರುತ್ತೇನೆ. ನಾನು ಅವನಿಗೆ ನೀನು ಮಾಡುತ್ತಿರುವುದು ಮೋಸ ಎಂದು ಬೈದಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ರೂ. 50,50,000/- ಹಣ ಕೊಡುವ ಪೂರ್ವದಲ್ಲಿ ಏನು ವ್ಯವಹಾರ ಆಗಿತ್ತು ಎಂಬುದರ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿಯು ಅದಕ್ಕಿಂತ ಪೂರ್ವದಲ್ಲಿಯೇ ರೂ. 24,00,000/- ಹಣ ಕೊಟ್ಟಿರುವುದಾಗಿ ಹೇಳಿರುತ್ತಾನೆ. ರೂ. 24,00,000/- ಹಣ ಕೊಟ್ಟ ಬಗ್ಗೆ ನಾನು ರಶೀದಿಯನ್ನು ಕೇಳಿರುತ್ತೇನೆ.

4. ನಾನು ರೂ.10,00,000/- ಹಣವನ್ನು ನನ್ನ ಹೆಂಡತಿಯ ತಮ್ಮನಾದ ಮಹಾಬಲೇಶ್ವರ ಇವರ ಕಡೆಯಿಂದ ಪಡೆದುಕೊಂಡು ನನ್ನ ಮಗನಿಗೆ ಕೊಟ್ಟಿರುತ್ತೇನೆ. ನಾನು ಮಹಾಬಲೇಶ್ವರ್ ಇವರ ಕಡೆಯಿಂದ ಹತ್ತು ಲಕ್ಷ ಹಣ ಪಡೆದುಕೊಂಡ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಇಪ್ಪತ್ತು ಲಕ್ಷ ಹಣ ಕೊಡುವ ಕಾಲಕ್ಕೆ ದಾಖಲೆ ಕೊಡುವಂತೆ ನಾನು ಕೇಳಿರುತ್ತೇನೆ. ಅವರು ಎರಡು ದಿನದಲ್ಲಿ ಕಂಪನಿಯಿಂದ ದಾಖಲೆ ಕೊಡುವುದಾಗಿ ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿಯವರು ಎರಡು ದಿನದ ನಂತರ ದಾಖಲೆಗಳನ್ನು ನಮಗೆ ನೀಡಿರುವುದಿಲ್ಲ. ಲಲಿತ್ ಮಹಲ್ ಹೊಟೇಲ್ ನ ಒಳಗೆ ಹೋಗುವಾಗ ಸೆಕ್ಯೂರಿಟಿಯವರು ಹೆಸರು ಮತ್ತು ವಿಳಾಸವನ್ನು ಬರೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಮಗೆ ಮಹಮ್ಮದ್ ರಫೀ ಎನ್ನುವವರು ವೈಯಕ್ತಿಕವಾಗಿ ಯಾರು ಎಂಬುವುದು ನನಗೆ ಗೊತ್ತಿರುವುದಿಲ್ಲ.

5. ಮಹಮ್ಮದ್ ರಫೀಯವರು ಡಿಸೆಂಬರ್ 2015 ರಿಂದ ಪರಿಚಯ ಇರುತ್ತಾರೆ ಎಂದರೆ ಸರಿಯಲ್ಲ. ಡಿಸೆಂಬರ್ 2015 ರಲ್ಲಿ ನಾನು ಮತ್ತು ನನ್ನ ಮಗ ಮಹಮ್ಮದ್ ರಫೀಯವರ ಕಡೆಯಿಂದ ಐದು ಲಕ್ಷ ಹಣ ಪಡೆದುಕೊಂಡು ಅದಕ್ಕೆ ಲಾಭಾಂಶ ಸೇರಿಸಿ ಕೊಡುವುದಾಗಿ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಮಾರ್ಚ್ 2016 ರಲ್ಲಿ ನಾನು ಮತ್ತು ನನ್ನ ಮಗ ಮಹಮ್ಮದ್ ರಫೀ ಇವರಿಗೆ ಐದು ಲಕ್ಷ ಹಾಗೂ ಒಂದು ಲಕ್ಷ ಲಾಭಾಂಶದ ಹಣ ಎಂದು ವಾಪಸ್ಸು ಕೊಟ್ಟಿರುತ್ತೇವೆ ಎಂದರೆ ಸಾಕ್ಷಿಯು ಅವರು ನನಗೆ ಯಾರು ಎಂದು ಪರಿಚಯ ಇಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ವ್ಯವಹಾರ ಬೆಂಗಳೂರಿನ ಆರ್ ಟಿ ನಗರದ ಕಾಫಿ ಡೇ ಯಲ್ಲಿ ನಡೆದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪುನಃ 2016 ರಂದು ಆರ್ ಟಿ ನಗರದಕಾಫಿ ಡೇ ಯಲ್ಲಿ ಹತ್ತು ಲಕ್ಷ ಹಣವನ್ನು ಮಹಮ್ಮದ್ ರಫೀ ಇವರಿಂದ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಜುಲೈ 2016 ರಲ್ಲಿ 10 ಲಕ್ಷ ಹಾಗೂ 2 ಲಕ್ಷ ಲಾಭಾಂಶದ ಹಣವನ್ನು ಮಹಮ್ಮದ್ ರಫೀ ಇವರಿಗೆ ಮರುಪಾವತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 29-10-2016 ರಲ್ಲಿ ನಾನು ಪುನಃ 40 ಲಕ್ಷ ಹಣವನ್ನು ಮಹಮ್ಮದ್ ರಫೀ ಇವರಿಂದ ರಿಯಲ್ ಎಸ್ಟೇಟ್ ವ್ಯಾಪಾರದ ಸಂಬಂಧ ಹಣ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಿಃ23-02-2017 ರಲ್ಲಿ ನಾವು ಹಣ ಕೊಟ್ಟ ಸಂಬಂಧ ಜಗಳವಾಗಿದ್ದು ಆ ಸಂಬಂಧ ಆರ್ ಟಿ ನಗರದ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

6. ರೈಸ್ ಪುಲ್ ವ್ಯವಹಾರದ ಸಂಬಂಧ ನಾನು ದೊಡ್ಡ ಸ್ವಾಮೀಜಿಯನ್ನಾಗಲೀ ಅಥವಾ ಸಣ್ಣ ಸ್ವಾಮೀಜಿಯನ್ನಾಗಲೀ ಭೇಟಿಯಾಗಿ ಮಾತನಾಡಿರುವುದಿಲ್ಲ ಎಂದರೆ ಸರಿ. ನನ್ನ ಮಗನ ಸಹಿಯನ್ನು ಎಷ್ಟು ಖಾಲಿ ಕಾಗದ ಪತ್ರಗಳಿಗೆ ಪಡೆದುಕೊಂಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಮಗನ ಕೈ ರಟ್ಟೆಗೆ ಹೊಡೆತ ಬಿದ್ದ ಸಂಬಂಧ ನಾನು ಅಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ನಾವು ಹುಳಿಯಾರಕ್ಕೆ ಬಂದಿದ್ದು ಅಲ್ಲಿ ಪೊಲೀಸ್ ಠಾಣೆಗೆ ದೂರು ಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಡಿಸೆಂಬರ್ 2016 ರಲ್ಲಿ ಘಟನೆಯಾಗಿದ್ದು, ತಕ್ಷಣದಲ್ಲಿ ನಾವು ದೂರು ಕೊಡಲು ಪ್ರಯತ್ನ ಮಾಡಿಲ್ಲ ಎಂದರೆ ಸಾಕ್ಷಿಯು ಎನ್ ಆರ್ ಪುರದಲ್ಲಿ ದೂರು ಕೊಡಲು ಹೋಗಿದ್ದು ಅವರು ತೆಗೆದುಕೊಳ್ಳದೇ ಇದ್ದ ಕಾರಣ ಚಿಕ್ಕಮಗಳೂರು ಎಸ್ ಪಿ ಕಚೇರಿಯಲ್ಲಿ ದೂರು ಕೊಟ್ಟಿರುವುದಾಗಿ ಉತ್ತರಿಸಿರುತ್ತಾರೆ. ಡಿಸೆಂಬರ್ 2016, ಜನವರಿ ಮತ್ತು ಫೆಬ್ರುವರಿ ತಿಂಗಳಲ್ಲಿ ದೂರು ಕೊಡಲು ಪ್ರಯತ್ನ ಪಟ್ಟಿಲ್ಲ ಎಂದರೆ ಸಾಕ್ಷಿಯು ನಾನು ದೂರು ಕೊಟ್ಟಿಲ್ಲ ನನ್ನ ಮಗನಿಗೆ ಅದು ಗೊತ್ತು ಎಂದು ಉತ್ತರಿಸಿರುತ್ತಾರೆ. ದಿಃ19-12-2016 ರಿಂದ ಫೆಬಬ್ರುವರಿ, 23 ನೇ ಮಾರ್ಚ ರವರೆಗೆ ನಾನು ನನ್ನ ಮಗನನ್ನು ಘಟನೆಯ ಬಗ್ಗೆ ವಿಚಾರಿಸಿರುವುದಿಲ್ಲ ಎಂದರೆ ಸರಿ. ನನ್ನ ಮಗ ಆರೋಪಿತರಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಈ ಕೇಸಿಗೂ ಯಾವುದೇ ಸಂಬಂಧ ಇರದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ 1, 2, ಮತ್ತು 4 ರ ಪರ ವಕೀಲರು ಆರೋಪಿ 3 ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಪಾಟೀ ಸವಾಲು ಃ ಆರೋಪಿ 3 ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಆರೋಪಿ 5 ರವರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

<u>ಮರು ವಿಚಾರಣೆ ಃ ಇಲ್ಲ ಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-xx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ